# Current affairs of 2018-08-25 by KPSCVAANI.com

## * ಚಂದ್ರನ ಮೇಲೆ ಐಸ್

ಈ ಮಂಜುಗಡ್ಡೆಗಳ ಸಂಗ್ರಹವು ಚಂದ್ರನ ದಕ್ಷಿಣ ಮತ್ತು ಉತ್ತರ ಧ್ರುವಗಳಲ್ಲಿ ಇರುವುದಾಗಿ ಹೇಳಿದ್ದಾರೆ. 2008ರಿಂದ 2009ರ ನಡುವೆ ಚಂದ್ರನಲ್ಲಿಗೆ ಹೋಗಿದ್ದ ಭಾರತದ ಚಂದ್ರಯಾನ-1 ಬಾಹ್ಯಾಕಾಶ ನೌಕೆಯ ಸಾಧನವು ನೀಡಿರುವ ಮಾಹಿತಿಗಳ ಆಧಾರದಲ್ಲಿ ವಿಜ್ಞಾನಿಗಳು ಇನ್ನೂ ಖಚಿತವಾಗಿ ಹೇಳಿದ್ದಾರೆ. ಈ ಕುರಿತಾದ ವರದಿಯು ಜರ್ನಲ್ ಪ್ರೊಸೀಡಿಂಗ್ಸ್ ಆಫ್ ದಿ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸ್ (ಪಿಎನ್ಎಎಸ್)ನಲ್ಲಿ ಪ್ರಕಟಗೊಂಡಿದೆ. ಚಂದ್ರಯಾನ ನೌಕೆಯಲ್ಲಿದ್ದ ಮೂನ್ ಮೈನೆರೊಲಜಿ ಮ್ಯಾಪರ್ (ಎಂ3) ಸಾಧನವು ಚಂದ್ರನ ಮೇಲ್ಮೈನಲ್ಲಿ ವಾಟರ್ -ಐಸ್ ಇರುವ ಕುರಿತು ಸಾಕ್ಷ್ಯಗಳನ್ನು ಗುರುತಿಸಿತ್ತು .

## * ಏಷ್ಯನ್ ಗೇಮ್ಸ್: ಶಾಟ್‌ಪುಟ್‌ನಲ್ಲಿ ಚಿನ್ನ ಗೆದ್ದ ತಾಜಿಂದರ್!



ಇಂಡೋನೇಷ್ಯಾದ ಜಕಾರ್ತಾದಲ್ಲಿ ನಡೆಯುತ್ತಿರುವ ಏಷ್ಯನ್ ಗೇಮ್ಸ್ 2018ರಲ್ಲಿ ಭಾರತೀಯ ಕ್ರೀಡಾಪಟುಗಳ ಪದಕ ಬೇಟೆ ಮುಂದುವರಿದಿದ್ದು, ಇಂದು ಶಾಟ್ ಪುಟ್ ತಾಜಿಂದರ್ ಪಾಲ್ ಸಿಂಗ್ ತೂರ್ ಚಿನ್ನದ ಪದಕ ಗೆದ್ದು ಸಂಭ್ರಮಿಸಿದ್ದಾರೆ. ಜಕಾರ್ತಾದಲ್ಲಿ ನಡೆಯುತ್ತಿರುವ ಏಷ್ಯನ್ ಗೇಮ್ಸ್ ನ ಶಾಟ್ ಪುಟ್ ಸ್ಪರ್ಧೆಯಲ್ಲಿ ಭಾರತದ ತಾಜೀಂದರ್ ಪಾಲ್ ಸಿಂಗ್ ಚಿನ್ನ ಗೆದ್ದಿದ್ದು, ತಾಜಿಂದರ್ 20.75 ಮೀಟರ್ ದೂರಕ್ಕೆ ಗುಂಡನ್ನು ಎಸೆಯುವ ಮೂಲಕ ಈ ದಾಖಲೆ ನಿರ್ಮಿಸಿದರು. ತಮ್ಮ ಐದನೇ ಪ್ರಯತ್ನದಲ್ಲಿ ತಾಜೀಂದರ್ ಪಾಲ್ ಸಿಂಗ್ ಅತ್ಯಂತ ದೂರಕ್ಕೆ ಚೆಂಡನ್ನು ಎಸೆಯುವ ಮೂಲಕ ಅಗ್ರ ಸ್ಥಾನಕ್ಕೇರಿ ಚಿನ್ನದ ಪದಕ ಗಳಿಸಿದರು. ಇದು ಭಾರತಕ್ಕೆ ಕೂಟದ 7ನೇ ದಿನ ದೊರೆತ ಮೊದಲ ಚಿನ್ನದ ಪದಕವಾಗಿದೆ